ಬೈಂದೂರಿನ ಸಬ್ ಸ್ಟೇಷನ್

೯೭. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಈ ಹಿಂದೆಯೇ ಮಂಜೂರಾದ ವಿದ್ಯುತ್ ಸಬ್ ಸ್ಟೇಶನ್ ಈವರೆಗೂ ಸ್ಥಾಪಿಸದಿರಲು ಕಾರಣಗಳೇನು ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು.

ಆ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿ ಮತ್ತು ಹಾಲಾಡಿಗಳಲ್ಲಿ ಸಬ್ ಸ್ಟೇಷನ್ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ, ಲೋಕೋಪಯೋಗಿ ಮಂತ್ರಿ ಮತ್ತು ಇಂಧನ ಸಚಿವರು).—

ಅ) ಕುಂದಾಪುರದಿಂದ ಬೈಂದೂರಿಗೆ ೩೪ ಕಿ.ಮೀ. ಉದ್ದದ ೫೩ ಕೆ.ವಿ. ಟ್ರಾನ್ಸ್‌ಮಿಷನ್ ಲೈನಿನ ನಿರ್ಮಾಣ ಕಾರ್ಯದ ಗುತ್ತಿಗೆಯನ್ನು ಪಡೆದಿರುವ ಗುತ್ತಿಗೆದಾರರು ಕೆಲಸವನ್ನು ಪ್ರಾರಂಭಿಸದೇ ಇರುವುದರಿಂದ ನಿರ್ಮಾಣ ಕಾರ್ಯದಲ್ಲಿ ವಿಳಂಬವಾಗಿದೆ. ಆದರೂ ಸಹ ೧೯೯೦-೯೧ನೇ ಸಾಲಿನಲ್ಲಿ ಸದರಿ ಲೈನ್ ಮತ್ತು ಬೈಂದೂರಿನಲ್ಲಿ ೩೩-೧೧ ಕೆ.ವಿ. ೧ x ೫ ಎಂ.ವಿ.ಎ ಸಾಮರ್ಥ್ಯದ ಸಬ್ ಸ್ಟೇಷನ್ ನಿರ್ಮಾಣ ಕಾರ್ಯಗಳನ್ನು ಪೂರೈಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ, ಈ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ಆ) ಏನೇ ಪಂಚವಾರ್ಷಿಕ ಯೋಜನೆಯ ಅವಧಿ ೧೯೯೦-೯೫ರಲ್ಲಿ ಕುಂದಾಪುರ ತಾಲ್ಲೂಕಿನ ಹಾಲಾಡಿಯಲ್ಲಿ ಒಂದು ೧೦೦ ಕೆ.ವಿ., ೧x೫ ಎಂ.ವಿ.ಎ, ಸಾಮರ್ಥ್ಯದ ಟ್ಯಾಪ್ ಆಫ್ ಸ್ಟೇಷನ್‌ನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಆದರೆ, ಇದೇ ತಾಲ್ಲೂಕಿನ ಹೆಮ್ಮಾಡಿಯಲ್ಲಿ ಸಬ್ ಸ್ಟೇಷನ್ ನಿರ್ಮಾಣ ಮಾಡುವ ಉದ್ದೇಶವಿಲ್ಲ.

ಸರ್ಕಾರದ ಇಲಾಖೆಗಳಲ್ಲಿ ನಿವೃತ್ತಿ ಹೊಂದಿದವರ ಸೇವೆಯನ್ನು ವಿಸ್ತರಿಸಿರುವ ಬಗ್ಗೆ

೧೨೧. ಶ್ರೀ ಆರ್.ಎನ್. ನಾಯ್ಕ (ಭಟ್ಕಳ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಸೇವೆಯಲ್ಲಿ ೧೯೯೦ನೇ ಇಸವಿಯಲ್ಲಿ ನಿವೃತ್ತಿ ಹೊಂದಿದವರ ಸೇವೆಯನ್ನು ವಿಸ್ತರಿಸಿ ಮತ್ತೆ ಸರ್ಕಾರಿ ಸೇವೆಯಲ್ಲಿ ಮುಂದುವರೆಸಲಾಗಿರುವ ವಿವಿಧ ಪ್ರಾಂಡಳಿ, ನಿಗಮ, ಪ್ರಾಧಿಕಾರ ಹಾಗೂ ಸಚಿವಾಲಯದಲ್ಲಿರುವ ಅಧಿಕಾರಿಗಳ ಸಂಖ್ಯೆ ಎಷ್ಟು? (ಇಲಾಖಾವಾರು ಹೆಸರು ಪದನಾಮ ಹಾಗೂ ಏಂದಿನಿಂದ ಅವರ ಸೇವೆಯನ್ನು ಮುಂದುವರಿಸಲಾಗಿದೆ ಎಂಬ ಪೂರ್ಣ ವಿವರ ನೀಡುವುದು).

ಆ) ಇವರನ್ನು ಈ ರೀತಿ ಮುಂದುವರಿಸಲು ಕಾರಣಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ವಿವರಗಳನ್ನು ಸೂಚಿಸುವ ಪಟ್ಟಿಯನ್ನು ಲಗತ್ತಿಸಿದೆ.

ಆ) ಆಡಳಿತದ ಹಿತದೃಷ್ಟಿಯಿಂದ.